**ವಾರ್ಡ್ ಸಂಖ್ಯೆ-27 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ 13-05-2021ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ WDC (ವಿಕೇಂದ್ರಿಕೃತ ಚಿಕಿತ್ಸಾ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ) ಗೆ ಸಂಬಂಧಿಸಿದ ಸಭೆಯ ನಡವಳಿಗಳು**

ವಿಷಯ: ಬಾಣಸವಾಡಿ ವಾರ್ಡ್-27 DETER ಸಮಿತಿ ಸಭೆಯ ನಡವಳಿಗಳು

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ /158/ಟಿಎನ್‌ಆರ್/2020(1) ದಿನಾಂಕ 7-5-2021.

2) ಮುಖ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಬಿ12(ಕೋ-19)ಪಿಆರ್/04/21-22.

ಹಾಜರಿದ್ದ ಅಧಿಕಾರಿಗಳು/ಸದಸ್ಯರು:

1. ಶ್ರೀಮತಿ ಮಧು ಎಸ್.ಬಿ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು
2. ಶ್ರೀ ವಿನಾಯಕ್ ವಿ ನಾಯಕ್, ವಾರ್ಡ್‌ನ ಸಹಾಯಕ ಅಭಿಯಂತರರು, ಹಾಗು ಸದಸ್ಯ ಕಾರ್ಯದರ್ಶಿ
3. ಶ್ರೀ ಕುಮಾರ್, ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ-27 ಬಾಣಸವಾಡಿ
4. ಶ್ರೀ ವಿ. ಕೋದಂಡರೆಡ್ಡಿ, ಬಿ.ಬಿ.ಎಂ.ಪಿ ಮಾಜಿ ಸದಸ್ಯರು
5. ಶ್ರೀ ಅಭಿಲಾಷ್ ರೆಡ್ಡಿ, ಸದಸ್ಯರು
6. ಶ್ರೀ ಶ್ರೀಧರ, ಸದಸ್ಯರು
7. ಶ್ರೀ ನವೀನ್ ವರ್ಧಮಾನ್, ಸದಸ್ಯರು
8. ಶ್ರೀ ಅಮಿತ್ ನಿಗ್ಲಿ, ಸದಸ್ಯರು
9. ಶ್ರೀಮತಿ ಶ್ರೀವಿದ್ಯಾ ತಾರಕರಾಮ್, ಸದಸ್ಯರು
10. ಶ್ರೀ ತಾರಕ ಕೃಷ್ಣಮೂರ್ತಿ, ಸದಸ್ಯರು
11. ಶ್ರೀ ಬಾಬು.ಎಂ., ಸದಸ್ಯರು
12. ಶ್ರೀ ನಿತೀಶ್ ಎಸ್. ಸದಸ್ಯರು
13. ಶ್ರೀ ಪ್ರತಿಬಾ ನಕಿಲ್, ಸದಸ್ಯರು
14. ಶ್ರೀ ದೀಪಕ್ ನಕಿಲ್, ಸದಸ್ಯರು
15. ಕಾರ್ತಿಕ್ ಶೆಟ್ಟಿ, ಸದಸ್ಯರು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ಈಗಾಗಲೇ ಪಬ್ಲಿಕ್ ಸರ್ಕಾರಿ ಶಾಲೆಯಲ್ಲಿ ಲಸಿಕೆ ನೀಡುತ್ತಿದ್ದು, WDC (ವಿಕೇಂದ್ರಿಕೃತ ಚಿಕಿತ್ಸಾ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ)ಯನ್ನು ಸ್ಥಾಪಿಸಬೇಕಾಗಿರುವುದರಿಂದ, ಒಂದೇ ಕಡೆಯಲ್ಲಿ ಎರಡು ಕಾರ್ಯ ನಿರ್ವಹಿಸಿದಲ್ಲಿ ಜನಜಂಗುಳಿ ಜಾಸ್ತಿಯಾಗಿ ಕೋವಿಡ್-19 ಹೆಚ್ಚಾಗುವ ಸಂಭವವಿರುವುದರಿಂದ ಸದರಿ ಲಸಿಕೆ ಕೇಂದ್ರವನ್ನು ಮತ್ತೊಂದೆಡೆಗೆ ವರ್ಗಾಯಿಸಿ WDC (ವಿಕೇಂದ್ರಿಕೃತ ಚಿಕಿತ್ಸಾ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ) ಯನ್ನು ಪಬ್ಲಿಕ್ ಸರ್ಕಾರಿ ಶಾಲೆಯಲ್ಲಿ ಸ್ಥಾಪಿಸಲು ಸಭೆಯಲ್ಲಿ ಪ್ರಸ್ತಾಪಿಸಿ ತೀರ್ಮಾನಿಸಲಾಯಿತು.

2) ವಾರ್ಡ್ ಸಂಖ್ಯೆ 27ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಂಚೂಣಿ ಹಾಗೂ ಪೌರಕಾರ್ಮಿಕರಿಗೆ ಲಸಿಕೆಯನ್ನು ನೀಡಿರುವುದಿಲ್ಲವೆಂದು RWA ರವರು ಪ್ರಸ್ತಾಪಿಸಿದ್ದು, ವಾರ್ಡ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) RWA ಹಾಗೂ ಸ್ವಯಂಸೇವಕರ ಸಹಭಾಗಿತ್ವದೊಂದಿಗೆ ಪೌರಕಾರ್ಮಿಕರ ಮನವನ್ನು ಒಲಿಸಿ ಲಸಿಕೆಯನ್ನು ಮುಂದಿನ ದಿನಗಳಲ್ಲಿ ನೀಡಲು ಕ್ರಮವಹಿಸಲಾಗುವುದು.

3) ವಾರ್ಡ್-27 ವ್ಯಾಪ್ತಿಯ ಸ್ಮಶಾನಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡುವ ಬಗ್ಗೆ ಪ್ರಸ್ತಾಪಿಸಲಾಯಿತು.

4) ಮಾಸ್ಕ್ ಧರಿಸದಿರುವ ಸಾರ್ವಜನಿಕರಿಗೆ ಕಡ್ಡಾಯವಾಗಿ ಶುಲ್ಕವನ್ನು ಹಾಕಿ, ಮಾಸ್ಕ್ ಧರಿಸಲು ಸೂಚಿಸುವಂತೆ ಮಾರ್ಷಲ್‌ಗಳಿಗೆ ಸಭೆಯಲ್ಲಿ ತಿಳಿಸಲಾಯಿತು.

5) ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆಯನ್ನು ನೀಡುವ ಸಂಭವವಿದ್ದಾಗ, ಈಸ್ಟ್ ಪಾಯಿಂಟ್ ಕಾಲೇಜ್, ನ್ಯೂಶೋರ್ ಶಾಲೆ, ಹಾಗೂ ಮ್ಯಾಕ್ಸ್‌ವೆಲ್ ಪಟೇಲ್ ಶಾಲೆಗಳನ್ನು ಲಸಿಕಾ ಕೇಂದ್ರವಾಗಿ ಮಾಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಲಾಯಿತು

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ27, ಬಾಣಸವಾಡಿ

S. B. Madhu 13/5/2021
ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ27, ಬಾಣಸವಾಡಿ